# ಅಪೂರ್ವ-ಸೂರ್ಯ ಮದುವೆಗೆ ನಿರ್ಧಾರ

ಆ ದಿನ ಸಂಜೆ ಎಲ್ಲರೂ ಮನೆಯಲ್ಲಿದ್ದಾಗಲೇ, ಆದರ್ಶ ತನ್ನ ತಾಯಿಯೊಂದಿಗೆ ಆಗಮಿಸಿದ್ದ. ಕುಶಲೋಪರಿ ಮಾತನಾಡಿದ ನಂತರ ವಿದ್ಯಾ ನೇರವಾಗಿ ಅಣ್ಣ ಅತ್ತಿಗೆಯ ಬಳಿ ತಾನು ಬಂದ ಕಾರಣ ತಿಳಿಸಿದ್ದಳು.

'ಅಣ್ಣ, ಅತ್ತಿಗೆ, ನಿಮ್ಮಿಂದ ನನಗೆ ದೊಡ್ಡ ಉಪಕಾರವಾಗಬೇಕಿದೆ...ಇದನ್ನು ನೀವು ನಡೆಸಿಕೊಡ್ತೀರ ಅನ್ನುವ ನಂಬಿಕೆಯಿಂದ ಬಂದಿದ್ದೇನೆ...'ಅವಳ ಪೀಠಿಕೆಯ ಹಿನ್ನಲೆ ಅರಿವಾಗದೇ,

'ಏನು ವಿಷಯ ಅಂತ ಹೇಳಮ್ಮಾ.' ಎಂದರು ರಾಯರು. ಸೂರ್ಯ ಕೂಡಾ ಮೈಯ್ಯೆಲ್ಲ ಕಿವಿಯಾಗಿ ಕುಳಿತ.

'ನಿಮ್ಮ ಮನೇಲಿರುವ ಹುಡುಗಿ ಅಪೂರ್ವಳನ್ನು ನಮ್ಮ ಆದರ್ಶ ತುಂಬಾ ಮೆಚ್ಚಿಕೊಂಡಿದ್ದಾನೆ... ಮದ್ವೆ ಆದ್ರೆ ಅವಳನ್ನೇ ಅಂತ ಹಠ ಹಿಡಿದು ಕೂತಿದ್ದಾನೆ... ಬೇರೆ ಯಾವ ಹುಡ್ಗೀನ್ನ ತೋರಿಸಿದ್ರೂ ಒಪ್ತಾ ಇಲ್ಲ... ಈಗಿನ ಕಾಲದ ಹುಡ್ಗೂರು... ನಮ್ಮ ಮಾತು ಎಲ್ಲಿ ಕೇಳ್ತಾರೆ...? ಅವ್ರ ಸುಖ ಸಂತೋಷ ಮುಖ್ಯ ಅಲ್ವಾ... ಹುಡ್ಗಿ ನೋಡೋಕ್ಕೆ ಲಕ್ಷಣವಾಗಿದ್ದಾಳೆ... ಇಂಜಿನಿಯರಿಂಗ್

